490(374) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಒಟ್ಟು ಆರ್ಥಿಕವಾಗಿ ಹಿಂದುಳಿದ ಬಾಲಕಿಯರಿಗೆ ಸೈಕಲ್ ನೀಡಿದ ಸಂಖ್ಯೆ ಎಷ್ಟು, (ಜಿಲ್ಲಾವಾರು ವಿವರ ನೀಡುವುದು)

ಆ) ಈ ಯೋಜನೆಯಡಿಯಲ್ಲಿ ಲಾಭ ಪಡೆದ ಬಾಲಕಿಯ ಸಂಖ್ಯೆ ಎಷ್ಟು, ಹಾಗೂ ವಂಚಿತರಾದ ಬಾಲಕಿಯರ ಸಂಖ್ಯೆ ಎಷ್ಟು,

ಇ) ಈ ಯೋಜನೆಯಡಿಯಲ್ಲಿ ಸೈಕಲ್ ಖರೀದಿಗೆ ವೆಚ್ಚ ಮಾಡಿದ ಹಣವೆಷ್ಟು,

ಈ) ಈ ಯೋಜನೆಯು ಆರ್ಥಿಕವಾಗಿ ಹಿಂದುಳಿದ ಬಾಲಕರಿಗೂ ವಿಸ್ತರಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೆ, ಇದ್ದಲ್ಲಿ, ಯಾವ ವರ್ಷದಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 2006–07ನೇ ಸಾಲಿನಲ್ಲಿ 1,75,023 ಬಾಲಕಿಯರಿಗೆ ಉಚಿತ ಬೈಸಿಕಲ್‌ಗಳನ್ನು ವಿತರಿಸಲಾಗಿದೆ ಜಿಲ್ಲಾವಾರು ಪಟ್ಟಿ ಅನುಬಂಧ–1ರಲ್ಲಿ ನಮೂದಿಸಿದೆ

ಆ) ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ಒಟ್ಟು 3,14,913 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು ಸರ್ಕಾರಿ ಆದೇಶ ಸಂ ಇಡಿ 93 ಯೋಯೋಕಾ 2006, ದಿನಾಂಕ 14 7 2006 ರನ್ವಯ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಿಗೆ ಸೇರಿದ 1,75,023 ಫಲಾನುಭವಿಗಳಿಗೆ ಮಾತ್ರ ಬೈಸಿಕಲ್‌ಗಳನ್ನು ವಿತರಿಸಲಾಗಿದೆ ಉಳಿದ 1,39,170 ವಿದ್ಯಾರ್ಥಿನಿಯರು ಈ ಯೋಜನೆಗೆ ಒಳಪಡದೇ ಇರುವುದರಿಂದ ಬೈಸಿಕಲ್ ನೀಡಿರುವುದಿಲ್ಲ

ಇ) ರೂ 35,52,96,690 00 (ಮೂವತ್ತೈದು ಕೋಟಿ ಐವತ್ತೆರಡು ಲಕ್ಷ ತೊಂಬತ್ತಾರು ಸಾವಿರದ ಆರು ನೂರ ತೊಂಬತ್ತು ಮಾತ್ರ)ಗಳನ್ನು ವೆಚ್ಚ ಮಾಡಲಾಗಿದೆ

ಈ) ಸರ್ಕಾರಿ ಆದೇಶ ಸಂಖ್ಯೆ ಇಡಿ 271 ಯೋಯೋಕಾ 2006, ಬೆಂಗಳೂರು ದಿನಾಂಕ 6.12.2007ರಲ್ಲಿ 2006-07ನೇ ಸಾಲಿನಲ್ಲಿಯೇ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಿಗೆ ಸೇರಿದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಾಲಕರಿಗೂ ವಿತರಿಸಲು ಆದೇಶ ನೀಡಲಾಗಿದೆ

ಅನುಬಂಧ-1

ಹೆಣ್ಣು ಮಕ್ಕಳಿಗೆ ಬೈಸಿಕಲ್ ವಿತರಣೆಯ ಜಿಲ್ಲಾವಾರು ವಿವರ

ಕ್ರ.ಸಂ	ಜಿಲ್ಲೆಯ ಹೆಸರು	ಒಟ್ಟು ಸರಬರಾಜು
1	ಮಧುಗಿರಿ	5638
2	ಕೋಲಾರ	5985
3	ಚಿಕ್ಕಬಳ್ಳಾಪುರ	5653
4	ಚಿತ್ರದುರ್ಗ	7717
5	ತುಮಕೂರು	6853
6	ದಾವಣಗೆರೆ	7924
7	ಬೆಂಗಳೂರು ಉತ್ತರ	2806
8	ಬೆಂಗಳೂರು ದಕ್ಷಿಣ	5421
9	ಬೆಂಗಳೂರು ಗ್ರಾಮಾಂತರ	7135
10	ಶಿವಮೊಗ್ಗ	7334
11	ಚಿಕ್ಕಮಗಳೂರು	4187
12	ಚಾಮರಾಜನಗರ	3498
13	ಉಡುಪಿ	3913
14	ದಕ್ಷಿಣ ಕನ್ನಡ	5653
15	ಮಂಡ್ಯ	7566
16	ಕೊಡಗು	1567
17	ಮೈಸೂರು	12207
18	ಹಾಸನ	7993

ಕ್ರ.ಸಂ	ಜಿಲ್ಲೆಯ ಹೆಸರು	ಒಟ್ಟು ಸರಬರಾಜು
19	ಕೊಪ್ಪಳ	3838
20	ಬಳ್ಳಾರಿ	4828
21	ರಾಯಚೂರು	3684
22	ಗುಲ್ಬರ್ಗಾ	4027
23	ಬೀದರ್	7305
24	ಯಾದಗಿರಿ	3093
25	ಉತ್ತರ ಕನ್ನಡ	5457
26	ಗದಗ	2277
27	ಬೆಳಗಾವಿ ಉತ್ತರ–ಚಿಕ್ಕೋಡಿ	5886
28	ಬಾಗಲಕೋಟೆ	4452
29	ಬೆಳಗಾವಿ	4620
30	ಬಿಜಾಪುರ	6182
31	ಧಾರವಾಡ	3337
32	ಹಾವೇರಿ	6987
	ಒಟ್ಟು	**175023**

491(859) ಶ್ರೀ ಜೀವಿಜಯ ಬಿ ಎ (ಸೋಮವಾರಪೇಟೆ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಹೇಮಾವತಿ ಅಣೆಕಟ್ಟು ನಿರ್ಮಾಣದಿಂದಾಗಿ ಸ್ಥಳಾಂತರ ಮಾಡಿದ ಜನಾರ್ಧನಹಳ್ಳಿ ಮತ್ತು ಕಟ್ಟೆಮರ ಗ್ರಾಮಗಳನ್ನು ಪುನರ್ವಸತಿ ಮತ್ತು ಪರಿಹಾರ ಒದಗಿಸುವ ಬಗ್ಗೆ ಇಲ್ಲಿಯವರೆಗೆ ಕ್ರಮ ಕೈಗೊಳ್ಳದಿರಲು ಕಾರಣವೇನು,

ಆ) ಈ ಕಾಯ್ದಿರಿಸಲಾದ ಜಾಗದಲ್ಲಿ ಎಷ್ಟು ಸಮಯದೊಳಗೆ ನಿವೇಶನ ಮಂಜೂರು ಮಾಡಿ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡಲಾಗುವುದು?